**CW : 1**

PW : 1

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

## CC No.229/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಹೆಚ್ ಭಾಸ್ಕರ ಆಚಾರ್ |
| ತಂದೆಯ ಹೆಸರು | : | ಹೆಚ್ ರಾಜಗೋಪಾಲ ಆಚಾರ್ |
| ಪ್ರಾಯ | : | 65 ವರ್ಷ |
| ಉದ್ಯೋಗ | | ಕೃಷಿ ಮತ್ತು ವ್ಯವಹಾರ |
| ವಾಸಸ್ಥಳ | : | ಹಿಂದಾರು ಮನೆ , ಮುಂಡೂರು ಗ್ರಾಮ. |

ದಿನಾಂಕ:**22.04.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನನಗೆ ಸೇರಿದ ಮನೆ ನಂ.1-44/b. ನನ್ನ ಮನೆಯ ಸುತ್ತಮುತ್ತ 50 ಸೆಂಟ್ ಜಾಗ ಇರುತ್ತದೆ. ಅದಕ್ಕೆ ಸಂಬಂಧಿಸಿದ ಸರ್ವೆ ನಂ. ನೆನಪಿಲ್ಲ.

2. ದಿ.9-4-2022 ರಂದು ಮದ್ಯಾಹ್ನ ಸುಮಾರು 2.15 ರ ಸಮಯದಲ್ಲಿ ವಿಜಯಶೇಣವ ರವರು ಸುಮಾರು 6 ಜನರೊಂದಿಗೆ 2 ಕಾರಿನಲ್ಲಿ ನನ್ನ ಮನೆಯ ಅಂಗಳದಲ್ಲಿ ಇರುವ ತುಳಸಿಯ ಕಟ್ಟೆಯ ಹತ್ತಿರ ಬಂದರು. ನಾನು ಆ ಸಮಯದಲ್ಲಿ ಮನೆಯ ಒಳಗಡೆ ಇದ್ದೆನು. ಆಗ ಆರೋಪಿಗಳು ನನ್ನ ಮನೆಯ ಒಳಗಡೆ ಬಂದರು. 1 ನೇ ಆರೋಪಿ ನನಗೆ ನೀನು 7 ಲಕ್ಷ ಹಣ ಕೊಡಬೇಕು, ಇಲ್ಲದಿದ್ದರೆ ನಾನು ಬಿಡುವುದಿಲ್ಲ, ಜನರನ್ನು ಕರೆದುಕೊಂಡು ಬಂದಿದ್ದೇನೆ, ನಿಮ್ಮನ್ನು ಅಪಹರಿಸುತ್ತೇನೆ ಎಂದು ಜೋರಾಗಿ ಬೇಡದ ಅವಾಚ್ಯ ಶಬ್ದಗಳಿಂದ ಬೈದನು. ಮನೆಯಲ್ಲಿ ಮಹಿಳೆಯರಿದ್ದ ಕಾರಣ ನಾನು ಭಯದಿಂದ ಹೊರಗಡೆ ಬಂದೆನು. ಆಗ 1 ನೇ ಆರೋಪಿಯ ಜೊತೆ ಬಂದಿದ್ದ ವ್ಯಕ್ತಿಗಳೂ ಕೂಡಾ ಹಣ ಕೊಡಬೇಕು, ಇಲ್ಲದಿದ್ದರೆ ಕೊಲ್ಲುತ್ತೇವೆ ಎಂದು ಅವಾಚ್ಯ ಶಬ್ದಗಳಿಂದ ಬೈದರು. ಆರೋಪಿಗಳು ಸುಮಾರು 30-40 ನಿಮಿಷಗಳವರೆಗೆ ನಮ್ಮ ಮನೆಯ ಅಂಗಳದಲ್ಲಿದ್ದರು. ಆಗ ಅಲ್ಲಿಗೆ ಕೆಲಸ ಮಾಡುವ ಇಬ್ಬರು ಬಂದರು. ಅವರು ಬರುವುದನ್ನು ನೋಡಿದ ಆರೋಪಿಗಳು ಅಲ್ಲಿಂದ ಹೋದರು. ನಂತರ ನಾನು ಅದೇ ದಿನ ಸಂಜೆ ಪೊಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರನ್ನು ನೀಡಿದ್ದೇನೆ.

3. ಸಾಕ್ಷಿಯು ದೂರನ್ನು ಹಾಗೂ ಅದರಲ್ಲಿನ ಸಹಿಯನ್ನು ಗುರುತಿಸಿದ್ದು ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

4. ದಿ.11-4-2022 ರಂದು ಪೊಲೀಸರು ಮನೆಯ ಹತ್ತಿರ ಮಹಜರು ಮಾಡುವ ಸಲುವಾಗಿ ಬಂದಿದ್ದರು. ತಕ್ಷೀರು ನಡೆದ ಸ್ಥಳವನ್ನು ಪೋಲೀಸರಿಗೆ ನಾನೇ ತೋರಿಸಿದ್ದೇನೆ. ವಹಜರು ಕಾಲದಲ್ಲಿ ನನ್ನ ಸಂಗಡ ಲೋಕಯ್ಯ

ಮತ್ತು ಶೇಷಪ್ಪ ಎನ್ನುವವರೂ ಸಹ ಸಹಿ ಮಾಡಿದ್ದಾರೆ. ಮಹಜರನ್ನು ಹಾಗೂ ಅದರಲ್ಲಿನ ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರನ್ನು ಗುರುತಿಸಿದ್ದು ಅದನಬುನ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಅಕ್ಟೋಬರ್ 2022 ರಲ್ಲಿಪೋಲೀಸರು ಮತ್ತೆ ನನ್ನನ್ನು ಪೊಲೀಸ್ ಠಾಣೆಗೆ ಕರೆಸಿದ್ದು ನಾನು ಹೋಗಿದ್ದೆನು. ಪೊಲೀಸ್ ಠಾಣೆಯಲ್ಲಿ ಪೋಲೀಸರು ನಮ್ಮ ಮನೆಗೆ ಬಂದಿದ್ದ ಆರೋಪಿಗಳನ್ನು ತೋರಿಸಿದ್ದು ಅವರಲ್ಲಿ ನಾನು 1 ನೇ ಆರೊಪಿಯನ್ನು ಗುರುತಿಸಿದೆದನು. ಉಳಿದ ಆರೋಪಿಗಳ ಹೆಸರು ನನಗೆ ಗೊತ್ತಿಲ್ಲ, ಆದರೂ ಅವರ ಮುಖ ಪರಿಚಯ ಇರುತ್ತದೆ.

5. ದೂರು ಕೊಟ್ಟ ನಂತರ ಪೋಲೀಸರು ನನ್ನನ್ನು 2 ಬಾರಿ ವಿಚಾರಣೆ ಮಾಡಿದ್ದಾರೆ. ಆ ದಿನ ನಮ್ಮ ಮನೆಗೆ ಬಂದು ಗಲಾಟೆ ಮಾಡಿದ ಆರೋಪಿಗಳಲ್ಲಿ ವಿಜಯಶೆಣವ ಎನ್ನುವವರನ್ನು ಗುರುತಿಸಬಲ್ಲೆ. ಉಳಿದ ಆರೋಪಿತರನ್ನು ಗುರುತಿಸಲಾಗುವುದಿಲ್ಲ. ಆರೋಪಿತರು ಬಂದಿದ್ದ ವಾಹನಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಭಾವಚಿತ್ರಗಳಲ್ಲಿ ತೋರಿಸಿದ ಕಾರನ್ನು ನೂಡಿ ಗುರುತಿಸಿರುತ್ತಾರೆ. ಸದರಿ ಭಾರವಚಿತ್ರಗಳನ್ನು ಒಟ್ಟಾರೆಯಾಗಿ ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಃ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

ನಮ್ಮ ಮನೆಯಿರುವ ಸ್ಥಳದ ಸರ್ವೆ ನಂ. 19/1A2 ಎಂದರೆ ಇರಬಹದು. ಆರೋಪಿಗಳು ನನ್ನನ್ನು ಹೊರಗಡೆ ಹೋಗದಂತೆ ತಡೆದರು ಎಂದರೆ ಸರಿ. ಪೊಲೀಸ್ ಠಾಣೆಗೆ ನಾನು ಅಕ್ಟೋಬರ್ ತಿಂಗಳಿನಲ್ಲಿ ಹೋದಾಗ 2 ರಿಂದ 7 ನೇ ಆರೋಪಿತರನ್ನೂ ಸಹ ಗುರುತಿಸಿದ್ದೇನೆ ಎಂದರೆ ಸರಿ.

ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ

ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಯಿತು.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.

**CW : 1**

PW : 1